

ಸೆಲೆಬ್ರಿಟಿ

# ಕಾಮನ್‌ಮ್ಯಾನ್! ಹೌದು ಸ್ವಾಮಿ

‘ಕಾಮನ್‌ಮ್ಯಾನ್’ ರೂಪದಲ್ಲಿ ‘ಬಿಗ್ ಬಾಸ್’ ಮನೆಯಲ್ಲಿದ್ದ ದಿವಾಕರ್ ರನ್ನರ್‌ಅಪ್ ಸ್ಥಾನಕ್ಕೆ ತೃಪ್ತಿಪಟ್ಟವರು. ಈಗ ಅವರೇನು ಮಾಡುತ್ತಿದ್ದಾರೆ? ಬಿಗ್‌ಬಾಸ್ ನಂತರದಲ್ಲಿ ಸ್ಟಾರ್‌ಪಟ್ಟ ನೆತ್ತಿಗೇರಿಸಿಕೊಳ್ಳದ ಅವರು ತಮ್ಮ ಮುಂಚಿನ ಔಷಧ ಮಾರಾಟ ವೃತ್ತಿಯನ್ನೇ ಕೈಗೊಂಡಿದ್ದಾರೆ.

■ ಇ.ಎಸ್. ಸುಧೀಂದ್ರ ಪ್ರಸಾದ್

‘ಕಲರ್ಸ್ ಕನ್ನಡ ವಾಹಿನಿ’ಯ ‘ಬಿಗ್ ಬಾಸ್’ 7ನೇ ಆವೃತ್ತಿ ಈಗ ಸುದ್ದಿಯಲ್ಲಿದೆ. ಪ್ರಸಕ್ತ ಆವೃತ್ತಿಯಲ್ಲಿ ಸೆಲೆಬ್ರಿಟಿಗಳದೇ ಗದ್ದಲವಾದರೆ, ಕಳೆದೆರಡು ಆವೃತ್ತಿಗಳಲ್ಲಿ ಜನಸಾಮಾನ್ಯರ ಪ್ರತಿನಿಧಿಗಳೂ ಬಿಗ್ ಬಾಸ್ ಮನೆಯಲ್ಲಿ ಸದ್ದುಮಾಡಿದ್ದರು. ಅವರಲ್ಲೊಬ್ಬರು ದಿವಾಕರ್.

ವ್ಯಾಪಾರ ಪ್ರತಿನಿಧಿಯಾಗಿ ದಿವಾಕರ್ ಇತ್ತೀಚೆಗೆ ಧಾರವಾಡಕ್ಕೆ ಬಂದಿದ್ದರು. ಜಿಲ್ಲಾಧಿಕಾರಿ ಕಚೇರಿ ಸುತ್ತಮುತ್ತ, ಸಪ್ತಾಪುರ, ಕೋರ್ಟ್ ವೃತ್ತದಲ್ಲಿ ‘ದಿವಾಕರ್ ರೆಮಿಡೀಸ್’ ಎಂಬ ಆಯುರ್ವೇದದ ಮಂಡಿನೋವಿನ ಔಷಧ ಮಾರುತ್ತಿದ್ದ ಅವರು ‘ಸುಧಾ’ ಪ್ರತಿನಿಧಿಗೆ ಮಾತಿಗೆ ಸಿಕ್ಕರು.

ಬೆಂಗಳೂರಿನ ನಾಗರಭಾವಿಯಲ್ಲಿ ನೆಲೆಸಿರುವ ದಿವಾಕರ್ ಮೈಸೂರಿನವರು. ಮಡಿಕೇರಿಯ ಪೊನ್ನಂಪೇಟೆಯಲ್ಲಿ ಬೆಳೆದವರು. 2ನೇ ತರಗತಿಗೆ ಶಾಲೆ ಬಿಟ್ಟ ಅವರು ದುಡಿಮೆಯತ್ತ ಮುಖಮಾಡಿದರು. ಕಾಫಿ ತೋಟದಲ್ಲಿ ಕೆಲಸ, ಕೆರೆ ಶುಚಿಗೊಳಿಸುತ್ತ ಹಣ ಗಳಿಸುವ ಮೂಲಕ ದುಡಿಮೆಯಲ್ಲಿ ನೆಮ್ಮದಿ ಕಂಡುಕೊಂಡರು. ನಂತರ ಮೈಸೂರು ಸೇರಿದ ಇವರು, ನಟ ವಿಷ್ಣುವರ್ಧನ್ ಅವರನ್ನು ನೋಡುವ ಸಲುವಾಗಿ ಬೆಂಗಳೂರು ಎಂಬ ಮಾಯಾನಗರಲ್ಲಿ ನೆಲೆನಿಂತರು. ಬಿಗ್‌ಬಾಸ್ ಪ್ರವೇಶಿಸಿದ ನಂತರ ಒಂದೆರಡು ಸಿನಿಮಾಗಳಲ್ಲಿ ನಟಿಸುವ ಅವಕಾಶವೂ ಅವರಿಗೆ ದೊರೆತಿತ್ತು.



ಯುವಕರೊಂದಿಗೆ ದಿವಾಕರ್ ‘ಸೆಲ್ಫಿ ಸಂಭ್ರಮ’

‘ಮೋಸ, ದ್ರೋಹ ಹಾಗೂ ವಂಚನೆ ಬಿಟ್ಟು ಜೀವನದಲ್ಲಿ ಎಲ್ಲ ರೀತಿಯ ಕೆಲಸಗಳನ್ನೂ ಮಾಡಿದ್ದೇನೆ. ಶೌಚಾಲಯ ಶುಚಿಗೊಳಿಸಿದ್ದೇನೆ, ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಿದ್ದೇನೆ. ಮರ ಹತ್ತಿದ್ದೇನೆ, ಈಗ ಔಷಧ ಮಾರುತ್ತಿದ್ದೇನೆ. ವಿಷ್ಣುವರ್ಧನ್ ಅವರ ಅಭಿಮಾನಿಯಾದ ನಾನು ಅವರಂತೆಯೇ ನಟನಾಗಬೇಕು ಎಂದು ಕನಸು ಕಂಡವನು. ಅವರನ್ನು ನೋಡಲೆಂದೇ ಬೆಂಗಳೂರಿಗೆ ಬಂದೆ. ಅದು ಸಾಧ್ಯವಾಗಲಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಬಿಗ್ ಬಾಸ್‌ನಲ್ಲಿ ಸ್ಟಾರ್ ನಟರ ನಡುವೆ ನಾನೊಬ್ಬ ಕಾಮನ್‌ಮ್ಯಾನ್. ಆದರೂ ನನಗೆ ಹೆಚ್ಚು ಓಟ್‌ಗಳು ಸಿಗುತ್ತಿದ್ದವು. ದುಬಾರಿ ಹೋಟೆಲಿನಲ್ಲಿ ಊಟ ಮಾಡಬೇಕು, ಕಾಫಿ ಕುಡಿಯಬೇಕು ಎಂದು ನಾನು ಬಯಸಿದವನಲ್ಲ. ಮೆಜೆಸ್ಟಿಕ್ ಫುಟ್‌ಪಾತ್‌ನಲ್ಲಿನ ಪಲಾವ್ ಕೊಡಿ ಎಂದೇ ಬಿಗ್‌ಬಾಸ್‌ಗೂ ಕೇಳಿದ್ದೆ. ಸಾಮಾನ್ಯರು ಅದನ್ನು ಮೆಚ್ಚಿದರು. ಅವರನ್ನು ನನ್ನಲ್ಲಿ ಕಂಡಿರುವುದಾಗಿ ಅನೇಕರು ಈಗ ಹೇಳುತ್ತಿದ್ದಾರೆ. ಅದನ್ನು ಕೇಳಿದಾಗ ನೆಮ್ಮದಿ ಅನ್ನಿಸುತ್ತದೆ ನನಗೆ’ ಎಂದರು ದಿವಾಕರ್.

‘2ನೇ ತರಗತಿವರೆಗಷ್ಟೇ ಓದಿರುವ ನನಗೆ ಓದಿನ ಬೆಲೆ ಈಗ ಅರ್ಥವಾಗುತ್ತಿದೆ. ದೇಶ ಸುತ್ತು, ಕೋಶ ಓದು ಎನ್ನುತ್ತಾರೆ. ಮಾತನಾಡಲು ಹಲವು ಭಾಷೆಗಳು ನನಗೆ ಬರುತ್ತವೆ. ಓದುವುದು ಕಷ್ಟ. ಆದರೆ ಜನರು ಕಲಿಸುವ ಪಾಠ, ಯಾವುದೇ ವಿಶ್ವವಿದ್ಯಾಲಯ ನೀಡದ್ದನ್ನು ಕಲಿಸಿದೆ. ಔಷಧ ಮಾರಲು ಜನರನ್ನು ಸೆಳೆಯಲು ಮಾಡುವ ಮಿಮಿಕ್ರಿ ನನಗೆ ನಟನೆಯನ್ನು ಕಲಿಸಿತು. ಅದಕ್ಕೆ ಬಿಗ್‌ಬಾಸ್ ವೇದಿಕೆ ಕಲ್ಪಿಸಿತು. ಅಲ್ಲಿಂದ ಬಂದ ನಂತರ ಹೇಮಂತ ಕೃಷ್ಣ ನಿರ್ದೇಶನದ ‘ರೇಸ್’ ಎಂಬ ಚಿತ್ರದಲ್ಲಿ ಪೊಲೀಸ್ ಪಾತ್ರದಲ್ಲಿ ನಟಿಸಿರುವೆ. ಶಿವು ಜಮಖಂಡಿ ನಿರ್ದೇಶನದ ‘ಗುಲಾಲ್.ಕಾಂ’ ಚಿತ್ರ ಸಿದ್ಧಗೊಂಡಿದೆ. ‘ವಿಜಯ ಮಲ್ಯ’ ಚಿತ್ರದಲ್ಲೂ ಪ್ರಮುಖ ಪಾತ್ರವನ್ನು ದೊರಕಿಸಿಕೊಟ್ಟಿದೆ’ ಎನ್ನುತ್ತಾರೆ.

ಸಿನಿಮಾಗಳಲ್ಲಿ ನಟಿಸುತ್ತಿದ್ದರೂ ನಾನು ನನ್ನ ವೃತ್ತಿಯನ್ನು ಬಿಡುವುದಿಲ್ಲ ಎನ್ನುವ ಅವರಿಗೆ, ಔಷಧ ಮಾರುತ್ತ ರಾಜ್ಯದ ಮೂಲೆ ಮೂಲೆ ಸುತ್ತುತ್ತ ಜನರೊಂದಿಗೆ ಬೆರೆಯುವುದು ಇಷ್ಟವಂತೆ. ‘ಬಿಗ್‌ಬಾಸ್ ಸಂದರ್ಭದಲ್ಲಿ ತಾಯಿ ಚಾಮುಂಡಿಯನ್ನು ಬೇಡಿಕೊಂಡಿದ್ದೆ – ನಾನಿಲ್ಲಿ ಗೆಲ್ಲದಿದ್ದರೂ ಪರವಾಗಿಲ್ಲ, ದುರಹಂಕಾರ ಬೆಳೆಯದಂತೆ ಕಾಪಾಡು’ ಎಂದು ನೆನಪಿಸಿಕೊಳ್ಳುವ ದಿವಾಕರ್, ಮಾತನಾಡುತ್ತಲೇ ತಮ್ಮ ಬಳಿ ಬಂದ ಯುವಕರ ಸೆಲ್ಫಿಗೆ ನಗುಚೆಲ್ಲಿದರು.

ಬಿಗ್‌ಬಾಸ್ ನಂತರ ದಿವಾಕರ್ ಅವರನ್ನು ಜನರು ಹೆಚ್ಚು ಗುರುತಿಸುತ್ತಾರೆ. ‘ಈಗ ಸೀಸನ್ 7 ನಡೆಯುತ್ತಿದೆ. ನಾನು 5ನೇ ಆವೃತ್ತಿಯಲ್ಲಿದ್ದವನು. ನನ್ನನ್ನು ಜನರು ಇನ್ನೂ ನೆನಪಿನಲ್ಲಿಟ್ಟುಕೊಂಡಿದ್ದಾರೆ ಎಂದರೆ ಧನ್ಯತಾಭಾವ ಮೂಡುತ್ತದೆ’ ಎನ್ನುತ್ತಾರೆ ದಿವಾಕರ್. ■